ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 1910/ 2023**

| | | |
|---|---|---|
| ಸಾಕ್ಷಿಯ ಹೆಸರಃ | ಶ್ರೀ ಮಲ್ಲಿಕಾರ್ಜುನ | ಫ್ರಾಸಾಃ 01 |
| ತಂದೆ ಹೆಸರುಃ | ಗಿರೀಶ್ ಹನಗಂಡಿ | ಚಾಸಾಃ 01 |
| ವಯಸ್ಸುಃ | 42 ವರ್ಷ | ದಿಃ 17.06.2026 |
| ಉದ್ಯೋಗಃ | ಅಬಕಾರಿ ನಿರೀಕ್ಷಕರು ಚಿತ್ತಾಪೂರ ವಲಯ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಚಿತ್ತಾಪೂರ | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ಜೂನ್ 2021 ರಿಂದ ಈವರೆಗೆ ಯಾದಗಿರಿ ಅಬಕಾರಿ ವಲಯದಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 29-08-2022 ರಂದು ಮಾಃ 1 -30 ಗಂಟೆಗೆ ನಾನು ಕಚೇರಿಯಲ್ಲಿ ಇದ್ದಾಗ ಮುನಗಲ್ ಗ್ರಾಮದ ಆರೋಪಿ ದೇವಪ್ಪ ಅಕ್ರಮವಾಗಿ ಸೇಂದಿ ಮಾರಾಟ ಮಾರುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದಿರುತ್ತದೆ. ನಾನು ನನ್ನ ಸಿಬ್ಬಂದಿಗಳು ಹಾಗೂ ವಾಹನ ಚಾಲಕನೊಂದಿಗೆ ಮುನಗಲ್ ಗ್ರಾಮಕ್ಕೆ ಹೋಗಿ ಗ್ರಾಮದ ಹತ್ತಿರ ಚಾಸಾ- 2 ಮತ್ತು 3 ರವರವನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದೆನು. ನಂತರ ಆರೋಪಿಯ ಮನೆಗೆ ಹೋಗಿದ್ದೆವು. ಮನೆಯಲ್ಲಿ ಯಾರೂ ಇರಲಿಲ್ಲ. ನಂತರ ಶೋಧನಾ ಸಮುಚ್ಚಿತ ಆಧಾರ ಪತ್ರ ತಯಾರಿಸಿಕೊಂಡು ಮನೆ ಪರಿಶೀಲನೆ ಮಾಡಲಾಗಿ ಒಂದು ಕೋಣೆಯಲ್ಲಿ ಒಂದು ಲೀಟರಿನ 30 ಬಾಟಲಿಗಳಲ್ಲಿ 30 ಲೀಟರ ಸೇಂದಿ ಇರುವುದು ಕಂಡು ಬಂದಿರುತ್ತದೆ. ಸ್ಥಳದಲ್ಲಿ ನೇರದಿದ್ದ ಜನರನ್ನು ವಿಚಾರಿಸಲಾಗಿ ಸದರಿ ಮನೆ ಆರೋಪಿ ದೇವಪ್ಪ ಈತನಿಗೆ ಸೇರಿದ್ದಾಗಿರುತ್ತದೆ ಎಂದು ತಿಳಿಸಿದರು. ನಂತರ 30 ಬಾಟಲಿಗಳ ಪೈಕಿ ಒಂದನ್ನು ರಾಸಾಯಿನಿಕ ಪರೀಕ್ಷೆಗೆ ಮಾದರಿಯಾಗಿ ತೆಗೆದುಕೊಂಡಿದ್ದೇವು. ಮಧ್ಯಾಹ್ನ 3.30 ರಿಂದ 4.30 ಗಂಟೆಯವರಗೆ ಸ್ಥಳದಲ್ಲಿ ಪಂಚನಾಮೆ ಮಾಡಿ ಮು.ಮಾಲಿನೊಂದಿಗೆ ಕಚೇರಿಗೆ ಬಂದು ಸರ್ಕಾರದ ಪರವಾಗಿ ದೂರು ದಾಖಲು ಮಾಡಿಕೊಂಡಿದ್ದೆನು. ನಂತರ ಕಡತವನು ತನಿಖೆಗಾಗಿ ಚಾಸಾ 8 ರವರಿಗೆ ಒಪ್ಪಿಸಿದ್ದೇನು.

ನ್ಯಾಯಾಲಯದ ಮುಂದೆ ಇರುವ ಆರೋಪಿ ಜಾಮೀನು ಪಡೆದುಕೊಂಡು ಕಚೇರಿಗೆ ಹಾಜರಾದಾಗ ನಾನು ಆತತನ್ನು ನೋಡಿದ್ದೆನು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಪ್ಲಾಸ್ಟಿಕ್ ಬಾಟಲಿಯನ್ನು ನೋಡಿ ಅದು ಮಾದರಿ ಸೇಂದಿ ಬಾಟಲಿಯಾಗಿರುತ್ತದೆ ಎಂದು ನುಡಿದಿದ್ದು ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು.

ಶೋಧನಾ ಪತ್ರವನ್ನು ನಿಪಿ-1 ಹಾಗೂ ಸಾಕ್ಷಿಯನ್ನು ನಿಪಿ-1(ಎ), ಪಂಚನಾಮೆಯನ್ನು ನಿಪಿ-02 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಮಾದರಿ ಮುದ್ರೆ ಚೀಟಿಯಿುನ್ನು ನಿಪಿ-03 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ), ದೂರನ್ನು ನಿಪಿ-4 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ), ಪ.ವ.ವರದಿಯನ್ನು ನಿಪಿ-5 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-5(ಎ)ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಆರ್ ಕೆ ವಕೀಲರಿಂದ</u>

ಮಾಹಿತಿ ಬಂದಾಗ ನಾವು ಯಾದಗಿರಿಯ ನಮ್ಮ ಕಚೇರಿಯಲ್ಲಿ ಇದ್ದೆವು. ಯಾದಗಿರಿಯಿಂದ ಮುನಗಲ್ ಗ್ರಾಮ ಸುಮಾರು 50 ರಿಂದ 55 ಕಿ.ಮಿ ದೂರ ಇದೆ ಎಂದರೆ ಸರಿ. ಯಾದಗಿರಿಯಿಂದ ಸದರಿ ಗ್ರಾಮಕ್ಕೆ ಹೋಗಲು ಎರಡು ಮಾರ್ಗಗಳಿದ್ದು ನಾವು ಸೈದಾಪೂರ ಮಾರ್ಗವಾಗಿ ಹೋಗಿದ್ದೆವು. ಸದರಿ ದೂರ ಪ್ರಯಾಣಿಸಲು ಒಂದು ಗಂಟೆ ಸಮಯ ಬೇಕಾಗುತ್ತದೆ. ಪಂಚರು ಮುನಗಲ್ ಗ್ರಾಮದ ಹತ್ತಿರ ನಿಂತಿದ್ದರು. ಚಾಸಾ 2 ರವರ ವಿಳಾಸ ಸೈದಾಪೂರ ಹಾಗೂ ಚಾಸಾ 3 ರವರ ವಿಳಾಸ ಯಾದಗಿರಿ ಇರುತ್ತದೆ ಎಂದರೆ ಸರಿ. ಸದರಿಯವರು ಮುನಗಲ್ ಗ್ರಾಮದ ಹತ್ತಿರ ಯಾಕೆ ಇದ್ದರು ಎಂಬ ಬಗ್ಗೆ ನಾನು ಅವರನ್ನು ವಿಚಾರಿಸಿಲ್ಲ. ಸದರಿಯವರು ನಮ್ಮ ಕಚೇರಿಯ ಖಾಯಂ ಪಂಚರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ನಮ್ಮ ಕಚೇರಿಯ ಇತರ ಪ್ರಕರಣಗಳ್ಳಲ್ಲಿಯೂ ಪಂಚರಾಗಿ ಕಾರ್ಯನಿರ್ವಹಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

02. ಸಾಮಾನ್ಯವಾಗಿ ಮನೆಯಲ್ಲಿ ಯಾರೂ ಇಲ್ಲದಾಗ ಮನೆಗೆ ಬೀಗ ಹಾಕಿರುತ್ತಾರೆ ಎಂದರೆ ಸಾಕ್ಷಿ ಆರೋಪಿ ಮಾಹಿತಿ ತಿಳಿದು ಓಡಿ ಹೋಗಿರಬಹುದು ಎಂದು ನುಡಿಯುತ್ತಾರೆ. ಮನೆಯಲ್ಲಿ ಎರಡು ಕೋಣೆಗಳು ಇದ್ದವು. ಮನೆಯ ಮುಂಭಾಗ ತಗಡಿನ ಶೀಟ್ ಹೊಂದಿದ್ದು ಹಿಂಭಾಗ ಮಣ್ಣಿನ ಛಾವಣಿ ಇರುತ್ತದೆ. ಸ್ಥಳದಲ್ಲಿ ಸುಮಾರು 5-

6 ಜನ ಸೇರಿದ್ದರು. ನನಗೆ ಅವರುಗಳ ಹೆಸರು ಗೊತ್ತಿಲ್ಲ. ಆರೋಪಿಯ ಮನೆಯ ಪಂಚಾಯತಿ ನಂಬರ ನಮೂದು ಇರಲಿಲ್ಲ. ಸೇಂದಿ ಬಾಟಲಿಗಳ ಮೇಲೆ ಯಾವುದೇ ಲೇಬಲ್ ಇರಲಿಲ್ಲ.

ನಾವು  ಯಾವುದೇ ದಾಳಿ ಮಾಡಿಲ್ಲ, ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮು.ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ದೂರು ದಾಖಲಿಸಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಯನ್ನು ಈ ದಿನ ಮೊದಲಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ